

بسم اللہ الرّحمٰن الرّحیم

## **‘ಇಯ್ಯಾಕ ನಅ್‌ಬುದು ವಇಯ್ಯಾಕನಸ್ತಈನ್’** *(ಸಹಾಯ ಯಾಚನೆ ಅಲ್ಲಾಹನೊಡನೆ ಮಾತ್ರ)*
## **ಎಂಬ ಪ್ರಾರ್ಥನೆಯನ್ನು ಮನವರಿಕೆ ಮಾಡಿಕೊಂಡು ಅಲ್ಲಾಹನ ಬಾಗಿಲಲ್ಲಿರುವವರಾಗಿರಿ**

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **28-11-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ– **ಇಸ್ತಿಆನತ್** ಎಂದರೆ ಸಹಾಯ ಯಾಚಿಸುವ ಬಗ್ಗೆ ನೆನಪಿಡಬೇಕಾದುದೇನೆಂದರೆ ವಾಸ್ತವಿಕವಾಗಿ ಸಹಾಯ ಮಾಡುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ.

ಇದರ ಅರ್ಥವೇನೆಂದರೆ ನಿಮ್ಮ ಕೆಲಸ ಈಡೇರಿಸಿಕೊಳ್ಳಲು ಯಾರದಾದರೂ ಆವಶ್ಯಕವಿದ್ದರೆ ಹಾಗೆ ಸಹಾಯ ಮಾಡಬಲ್ಲವನು ಅಲ್ಲಾಹನು ಮಾತ್ರವಾಗಿದ್ದಾನೆ. ಅವನೇ ನಿಮಗೆ ವಾಸ್ತವಿಕವಾಗಿ ಸಹಾಯ ನೀಡಬಲ್ಲವನಾಗಿದ್ದಾನೆ. ಅವನಿಗೆ ಸಹಾಯ ನೀಡುವ ಶಕ್ತಿ ಇದೆ ಮತ್ತು ಅವನೇ ಸಹಾಯ ಮಾಡುತ್ತಾನೆ. ಇದು ಎಷ್ಟು ಮುಖ್ಯ ವಿಷಯವಾಗಿದೆ ಎಂದರೆ ಒಬ್ಬ ನೈಜ ಸತ್ಯವಿಶ್ವಾಸಿ ಯಾವಾಗಲೂ ಈ ವಿಷಯವನ್ನು ತನ್ನ ಗಮನದಲ್ಲಿರಿಸಿಕೊಳ್ಳಬೇಕು. ವೈಯಕ್ತಿಕ ಆವಶ್ಯಕತೆಗಳನ್ನು ಈಡೇರಿಸಲಿಕ್ಕಾದರೂ ಅಥವಾ ಜಮಾಅತಿಗೆ ಸಂಬಂಧಿಸಿದ ಆವಶ್ಯಕತೆಗಳನ್ನು ಈಡೇರಿಸಲಿಕ್ಕಾದರೂ ಇದು ಅಗತ್ಯವಾಗಿದೆ. ಆದರೆ ನಾವು ಕಾಣುವುದೇನೆಂದರೆ ಇದು ಮಹತ್ವಪೂರ್ಣವಾಗಿದ್ದರೂ ಜನರು ಸಾಮಾನ್ಯವಾಗಿ ಇದರ ಕಡೆಗೆ ದೃಷ್ಟಿ ಹರಿಸುವುದಾಗಿ ಕಾಣುವುದಿಲ್ಲ. ಇದರ ಬಗ್ಗೆ ಎಷ್ಟು ಲಕ್ಷ್ಯ ನೀಡಬೇಕೋ ಅಷ್ಟು ಲಕ್ಷ್ಯ ನೀಡುವುದಿಲ್ಲ. ನಮ್ಮ ಪೈಕಿ ಬಹುತೇಕ ಜನರು ಹೀಗೆ ಹೇಳುತ್ತಾರೆ: “ಅಲ್ಲಾಹನು ಅನುಗ್ರಹ ಮಾಡಿದನು. ನಮ್ಮ ಆವಶ್ಯಕತೆ ಈಡೇರಿತು.” ಆದರೆ ತಳ ಸ್ಪರ್ಶಿಯಾಗಿ ಈ ವಿಷಯದ ಬಗ್ಗೆ ನಾವು ಪರಿಶೀಲಿಸಿದರೆ ನಮ್ಮ ಯೋಚನೆ ಹೇಗಿರುತ್ತದೆ ಎಂದರೆ ನಮ್ಮ ಕೆಲಸ ಈಡೇರಲು ನಾವು ಕೈಗೊಂಡ ವಿವಿಧ ಮಾರ್ಗಗಳೇ ಕಾರಣ. ಅವುಗಳಿಂದಲೇ ನಮ್ಮ ಕೆಲಸ ಈಡೇರಿತು ಎಂದು ಭಾವಿಸುತ್ತೇವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಲೇಖನದಲ್ಲಿ ಉದಾಹರಣೆಗಳನ್ನು ನೀಡಿ ಹಲವು ಸಂಭವಗಳನ್ನು ವಿವರಿಸಿದ್ದಾರೆ. ಮನುಷ್ಯನು ಹೀಗೆ ಭಾವಿಸುತ್ತಾನೆ: ನನಗೆ ವಿವಿಧ ಜನರು ಸಹಾಯ ಮಾಡಿದರು ಆ ಕಾರಣದಿಂದ ನನ್ನ ಕೆಲಸ ಈಡೇರಿತು ಎಂದು. ಅಥವಾ ಅವನು ಹೀಗೆ ಭಾವಿಸುತ್ತಾನೆ– ನಾನು ನನ್ನ ಶಕ್ತಿ ಸಾಮರ್ಥ್ಯಗಳಿಂದ ನನ್ನ ಉದ್ದೇಶ ಲಕ್ಷ್ಯವನ್ನು ತಲಪಿದೆ ಎಂದು.

ಸಾಮಾನ್ಯವಾಗಿ ಎಲ್ಲದಕ್ಕಿಂತಲೂ ಮೊದಲು ಮನುಷ್ಯನು ಭಾವಿಸುವುದೇನೆಂದರೆ ನಾನು ನನ್ನ ಎಲ್ಲಾ ಆವಶ್ಯಕತೆಗಳನ್ನು ಸ್ವತಃ ಈಡೇರಿಸಿಕೊಳ್ಳುವೆನು. ಅವನು ತನ್ನ ಶಕ್ತಿ, ತನ್ನ ಜ್ಞಾನ ಮತ್ತು ಬುದ್ಧಿವಂತಿಕೆಯ ಮೂಲಕ ತನ್ನ ಆವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತಾನೆ. ಅವನು ಆಗ ಭಾವಿಸುತ್ತಾನೆ– ನಾನು ನನ್ನ ನೈಪುಣ್ಯ, ಮತ್ತು ಶಕ್ತಿ ಸಾಮರ್ಥ್ಯಗಳ ಮೂಲಕ ನನ್ನ ಸಮಸ್ಯೆಗಳನ್ನು ಸ್ವತಃ ಪರಿಹರಿಸಿದೆ. ನಾನು ಯಾರಿಂದಲೂ ಸಹಾಯ ಪಡೆಯಲಿಲ್ಲ ನಾನು ಯಾರಿಂದಲೂ ಸಹಾಯ ಪಡೆಯುವುದಿಲ್ಲ ಎಂದು ಹೆಮ್ಮೆ ದೋರುತ್ತಾನೆ. ಆದರೆ ಕೆಲವು ಸಂದರ್ಭಗಳಲ್ಲಿ ಎಂತಹ ಪರಿಸ್ಥಿತಿ ಉಂಟಾಗುತ್ತದೆ ಎಂದರೆ ಅವನ ಆವಶ್ಯಕತೆಗಳನ್ನು ಈಡೇರಿಸಲು ಅವನಿಗೆ ಸ್ವತಃ ಸಾಧ್ಯವಾಗುವುದಿಲ್ಲ. ಅವನಿಗೆ ಬಾಹ್ಯ ಸಹಾಯದ ಆವಶ್ಯಕತೆ ಉಂಟಾಗುತ್ತದೆ. ಆಗ ಅವನು ತನ್ನ ಸಂಬಂಧಿಕರ ಸಹಾಯ ಕೇಳುತ್ತಾನೆ. ಅವರು ಸಹಾಯ ಮಾಡುತ್ತಾರೆ. ಆಗ ಅವನು ಯೋಚಿಸುತ್ತಾನೆ: ಸಂಬಂಧಿಕರಿರುವುದು ಒಳ್ಳೆಯದೇ ಆಗಿದೆ. ನನ್ನ ಸಂಬಂಧಿಕರು ಇಲ್ಲದಿರುತ್ತಿದ್ದರೆ ನನ್ನ ಆವಶ್ಯಕತೆ ಈಡೇರುತ್ತಿರಲಿಲ್ಲ. ಇನ್ನು ಕೆಲವು ಸಾರಿ ಎಂತಹ ಸ್ಥಿತಿ ಉಂಟಾಗುತ್ತದೆ ಎಂದರೆ ಅವನ ಸಂಬಂಧಿಕರು ಅವನಿಗೆ ಸಹಾಯ ಮಾಡಲು ಮತ್ತು ಅವನ ಆವಶ್ಯಕತೆ ಈಡೇರಿಸಲು ಸಾಧ್ಯವಾಗುವುದಿಲ್ಲ. ಆಗ ಅವನು ತನ್ನ ಸ್ನೇಹಿತರನ್ನು ಸಮೀಪಿಸುತ್ತಾನೆ. ಅವರಿಂದ ಸಹಾಯ ಬೇಡುತ್ತಾನೆ. ಅವರು ಸಹಾಯ ಮಾಡುತ್ತಾರೆ. ಆಗ ಅವನು ಭಾವಿಸುತ್ತಾನೆ: ಸ್ನೇಹಿತರಿರುವುದು ಎಷ್ಟು ಒಳ್ಳೆಯದಾಗಿದೆ. ಅವರು ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾರೆ. ಕೆಲವು ಸಾರಿ ಎಂತಹ ಪರಿಸ್ಥಿತಿ ಉಂಟಾಗುತ್ತದೆ ಎಂದರೆ ಸ್ನೇಹಿತರನ್ನು ಸಮೀಪಿಸಿದಾಗ ಅವರು ತಮ್ಮ ಕಷ್ಟಗಳ ಬಗ್ಗೆ ಹೇಳುತ್ತಾರೆ. ಕೆಲವು ಸಾರಿ ಸ್ನೇಹಿತರಿಗೆ ಅವನ ಕಷ್ಟ ನಿವಾರಣೆಯ ಸಾಮರ್ಥ್ಯವಿರುವುದಿಲ್ಲ. ಆಗ ಅವನು ತನ್ನ ಜಮಾಅತ್‌ನೊಂದಿಗೆ ಸಹಾಯ ಯಾಚಿಸುತ್ತಾನೆ. ಜಮಾಅತ್ ಅವನ ಆವಶ್ಯಕತೆ ಈಡೇರಿಸುವಾಗ ಅವನು ಯೋಚಿಸುತ್ತಾನೆ– ಜಮಾಅತ್‌ನೊಂದಿಗೆ ಸಂಬಂಧ ಹೊಂದುವುದು ಉತ್ತಮವಾಗಿದೆ. ಆಗ ಅವನ ಸಂಬಂಧ ಜಮಾಅತಿನೊಂದಿಗೆ ವರ್ಧಿಸುತ್ತದೆ.

ಆದರೆ ನಾನು ಕೆಲವು ಸಾರಿ ನೋಡಿದ್ದೇನೆ ಕೆಲವು ಜನರಿಗೆ ಇದರಿಂದ ದೋಷವೂ ಉಂಟಾಗಿದೆ. ಅವರು ಹೇಳುತ್ತಾರೆ: ನಾನು ಒಂದು ಸಂದರ್ಭದಲ್ಲಿ ಜಮಾಅತಿನ ಸಹಾಯ ಯಾಚಿಸಿದಾಗ ಜಮಾಅತಿನಿಂದ ಸಹಾಯ ಲಭಿಸಲಿಲ್ಲ ಎಂದು. ಕೆಲವು ಜನರಿಗೆ ತಮ್ಮ ಇಚ್ಛೆ ಪ್ರಕಾರ ಜಮಾಅತ್ ವರ್ತಿಸಿದರೆ ಅಥವಾ ಜಮಾಅತ್ ಸಹಾಯ

ಮಾಡಿದರೆ ಅವರ ಸಂಬಂಧ ಜಮಾಅತ್‌ನೊಂದಿಗೆ ವರ್ಧಿಸುತ್ತದೆ.

ಕೆಲವು ಸಾರಿ ಕೆಲವು ಮನುಷ್ಯರ ಜೀವಿತದಲ್ಲಿ ಎಂತಹ ಸಂದರ್ಭ ಬರುತ್ತದೆ ಎಂದರೆ ಅವನ ಸಂಬಂಧಿಕರು, ಸ್ನೇಹಿತರು ಮತ್ತು ಜಮಾಅತ್ ಸಹ ಕೆಲವು ಕಾರಣಗಳಿಂದ ಅವನಿಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ಆಗ ಅವನು ಅವನಿಗೆ ಸಂಬಂಧಿಸಿದ ಸರಕಾರದ ನೆರವು ಯಾಚಿಸಿ ಅದನ್ನು ಪಡೆಯುತ್ತಾನೆ. ಅಂತಹ ಸಂದರ್ಭಗಳಲ್ಲಿ ಆ ಮನುಷ್ಯನಿಗೆ ಸರಕಾರವೇ ಎಲ್ಲವೂ ಆಗಿರುತ್ತದೆ. ಉಳಿದವುಗಳೆಲ್ಲಾ ಹಿಂದೆ ಸರಿಯುತ್ತವೆ.

ಆದರೆ ಒಂದು ವಿಷಯವನ್ನು ನಿರಾಕರಿಸಲಾಗದು. ಒಂದು ಸಂದರ್ಭದಲ್ಲಿ ತನ್ನ ಪ್ರಯತ್ನವಾಗಲಿ ತನ್ನ ಸಂಬಂಧಿಕರಾಗಲಿ, ಸ್ನೇಹಿತರಾಗಲಿ, ಜಮಾಅತಾಗಲಿ, ಸರಕಾರವಾಗಲಿ, ಮಾನವ ಹಿತೈಷಿ ಸಂಸ್ಥೆಗಳಾಗಲಿ ಯಾವುದೂ ಸಹ ಒಬ್ಬ ಮನುಷ್ಯನಿಗೆ ಸಹಾಯಕ್ಕೆ ಒದಗದೆ ಇರುತ್ತದೆ. ಆಗ ತನ್ನ ಉದ್ದೇಶ ಲಕ್ಷ್ಯವನ್ನು ತಲಪುವುದು ಅಸಾಧ್ಯವೆಂದು ಅವನಿಗೆ ತೋರುತ್ತದೆ. ಆದರೆ ಇಂತಹ ಪರಿಸ್ಥಿತಿಯಲ್ಲೂ ಒಬ್ಬ ಮನುಷ್ಯನು ಜಯಶಾಲಿಯಾದರೆ ಅವನು ಭಾವಿಸುತ್ತಾನೆ: ನನಗೆ ಅದೃಶ್ಯವಾದೊಂದು ಸಹಾಯ ದೊರಕಿದ ಕಾರಣ ನಾನು ಜಯಶಾಲಿಯಾದೆ ಎಂದು.

ಒಬ್ಬನಿಗೆ ಅದೃಶ್ಯ ಸಹಾಯ ದೊರೆತ ಬಗ್ಗೆ ಎಷ್ಟು ದೃಢ ವಿಶ್ವಾಸ ಉಂಟಾಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಅವನು ತನ್ನ ಜಯವನ್ನು ದೇವನಿಗೆ ಸಂಬಂಧಿಸಿ ಹೇಳುತ್ತಾನೆ. ಅವನಿಗೆ ದೇವರೇ ತನ್ನ ಕೆಲಸ ಈಡೇರಿಸಿದನು ಎಂದು ದೃಢ ನಂಬಿಕೆ ಇದ್ದರೆ ಅವನು ಹಾಗೆ ಹೇಳುತ್ತಾನೆ.

ಆದರೆ ದೇವನೊಂದಿಗೆ ದೃಢವಾದ ಸಂಬಂಧ ಇಲ್ಲದವರು ಲೌಕಿಕ ಮಾರ್ಗಗಳೇ ತಮಗೆ ಪ್ರಯೋಜನಕರವೆಂದು ಭಾವಿಸುತ್ತಾರೆ. ಅವರು ಅವುಗಳ ಕಡೆಗೆ ದೃಷ್ಟಿ ಹಾಯಿಸುತ್ತಾರೆ. ಅವರು ಅಲ್ಲಾಹನ ಕಡೆಗೆ ನೋಡುವುದಿಲ್ಲ. ಆದರೆ ಎಲ್ಲಾ ಲೌಕಿಕ ಮಾರ್ಗಗಳು ನಿಷ್ಫಲವಾಗುವಾಗ ನಾಸ್ತಿಕ ವಾದಿಗಳು ಸಹ ಅಲ್ಲಾಹನ ಕಡೆಗೆ ಗಮನ ಹರಿಸುತ್ತಾರೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: وَإِذَا مَسَّكُمُ الضُّرُّ فِي الْبَحْرِ ضَلَّ مَنْ تَدْعُونَ إِلاَّ إِيَّاهُ فَلَمَّا نَجَّاكُمْ إِلَى الْبَرِّ أَعْرَضْتُمْ وَكَانَ الإِنْسَانُ كَفُورًا **ವ ಇಝಾ ಮಸ್ಸಕುಮು ಝ್ಝುರ್ರು ಫಿಲ್‌ಬಹ್‌ರಿ ಝುಲ್ಲ ಮನ್ ತದ್‌ಊನ ಇಲ್ಲಾ ಇಯ್ಯಾಹು ಫಲಮ್ಮಾ ನಜ್ಜಾಕುಮ್ ಇಲಲ್ ಬರ್‍ರಿ ಅಅ್‌ರಝ್‌ತುಮ್ ವ ಕಾನಲ್ ಇನ್‌ಸಾನು ಕಫೂರ** "ಸಮುದ್ರದಲ್ಲಿ ನಿಮಗೆ ಆಪತ್ತು ಬಂದರೆ, ಅವನ ಹೊರತು ನೀವು ಯಾರನ್ನೆಲ್ಲ ಕರೆದು ಪ್ರಾರ್ಥಿಸುತ್ತೀರೋ ಅವರೆಲ್ಲರೂ ನಿಮ್ಮಿಂದ ಕಣ್ಮರೆಯಾಗುವರು. ಆದರೆ ನಿಮ್ಮನ್ನು ಅವನು ಸುರಕ್ಷಿತವಾಗಿ ದಡ ಸೇರಿಸಿದರೆ (ಅವನಿಂದ) ನೀವು ಪರಾಙ್ಮುಖರಾಗುವಿರಿ. ನಿಜವಾಗಿಯೂ ಮನುಷ್ಯನು ಕೃತಘ್ನನೇ ಸರಿ."( ಪವಿತ್ರ ಖುರ್‌ಆನ್ 17: 68)

ಸಮುದ್ರದಲ್ಲಿ ಚಂಡಮಾರುತ ಬೀಸುವಾಗ ನೀವು ಅಲ್ಲಾಹನನ್ನು ಕರೆದು ಬೇಡಿಕೊಳ್ಳುತ್ತಿರುವಿರಿ. ಆದರೆ ನೀವು ರಕ್ಷಿಸಲ್ಪಟ್ಟಾಗ ಅವನನ್ನು ಮರೆತು ಬಿಡುತ್ತೀರಿ ಎಂದು ಅಲ್ಲಾಹನು ಈ ವಚನದಲ್ಲಿ ಸೂಚಿಸಿದ್ದಾನೆ.

ಮನುಷ್ಯರ ಪ್ರಕೃತಿ ಹೇಗಿದೆ ಎಂದರೆ ಕಷ್ಟ ಬಂದಾಗ ಅವರು ಅಲ್ಲಾಹನ ಕಡೆಗೆ ವಿನಯದಿಂದ ಬಾಗುತ್ತಾರೆ. ಇತರ ಸಹಾಯಕರನ್ನು ಅವರು ಆಗ ಮರೆತುಬಿಡುತ್ತಾರೆ. ಅವರು ಹೇಳುತ್ತಾರೆ: ಈ ಕಷ್ಟಕಾಲದಲ್ಲಿ ಕಷ್ಟದಿಂದ ವಿಮೋಚನೆ ದೊರೆತರೆ ನಾವು ಯಾವಾಗಲೂ ಅಲ್ಲಾಹನನ್ನು ಮಾತ್ರ ಸಹಾಯಕನೆಂದು ಭಾವಿಸುವೆವು ಮತ್ತು ಅವನನ್ನು ಮಾತ್ರ ಬೇಡುಕೊಳ್ಳುವೆವು ಎಂದು. ಆದರೆ ಕಷ್ಟ ನಿವಾರಣೆಯಾದ ಕೂಡಲೆ ಅವರು ಪುನಃ ಅಹಂಕಾರ ಮತ್ತು ಹೆಮ್ಮೆ ತೋರಿಸುತ್ತಾರೆ. ಮನುಷ್ಯನು ಅತ್ಯಂತ ಕೃತಘ್ನನೂ ಸ್ವಾರ್ಥಿಯೂ ಆಗಿದ್ದಾನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ದೇವನನ್ನು ನಂಬದ ನಾಸ್ತಿಕರು ಸಹ ಕಷ್ಟಕಾಲದಲ್ಲಿ ದೇವನಾಮವನ್ನೇ ಉಚ್ಚರಿಸುತ್ತಾರೆ ಎನ್ನುವುದರ ಬಗ್ಗೆ ಒಂದು ಉದಾಹರಣೆಯನ್ನು ವಿವರಿಸಿದ್ದಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಭೂಕಂಪ ಸಂಭವಿಸುವ ಬಗ್ಗೆ ಭವಿಷ್ಯವಾಣಿ ಪ್ರಕಟಿಸಿದ್ದರು. ಹಾಗೆ ಬಹು ದೊಡ್ಡ ಭೂಕಂಪ ಸಂಭವಿಸಿತು. ಲಾಹೋರು ಮೆಡಿಕಲ್ ಕಾಲೇಜಿನ ಒಬ್ಬ ವಿದ್ಯಾರ್ಥಿ ಪ್ರತಿ ದಿನ ತನ್ನ ಸಹಪಾಠಿಗಳೊಂದಿಗೆ ವಾದ ಪ್ರತಿವಾದ ಮಾಡುತ್ತಿದ್ದನು. ಅವನು ದೇವನ ಅಸ್ತಿತ್ವವನ್ನು ಪರಿಹಾಸ ಮಾಡುತ್ತಿದ್ದನು. ಆದರೆ ಭೂಕಂಪವಾಗಲು ತೊಡಗಿದಾಗ ಅವನಿದ್ದ ಕೋಣೆಯ ಛಾವಣಿ ಕುಸಿದು ಬೀಳುವ ಭಯ ಅವನಲ್ಲಿ ತಲೆದೋರಿತು. ಅದು ಬೀಳದಂತೆ ತಡೆಯಲು ಯಾರಿಂದಲೂ ಸಾಧ್ಯವಾಗದೆಂದು ಅವನಿಗೆ ಮನವರಿಕೆಯಾಯಿತು. ಅವನು ಹಿಂದುವಾಗಿದ್ದನು. ಆಗ ಅವನ ಬಾಯಿಯಿಂದ ತಕ್ಷಣ ರಾಮ್, ರಾಮ್ ಎಂಬ ಪದಗಳು ಹೊರಬಂದುವು. ಮರುದಿನ ಅವನ ಸಹಪಾಠಿಗಳು ವಿಚಾರಿಸಿದರು– ನೀನು ದೇವನ ಅಸ್ತಿತ್ವವನ್ನೇ ನಂಬುತ್ತಿರಲಿಲ್ಲ ಮತ್ತೆ ನೀನು ಯಾಕೆ ರಾಮ್ ರಾಮ್ ಎಂದು ಬೊಬ್ಬಿಟ್ಟೆ.?

ಹಿಂದುಗಳು ದೇವನನ್ನು ರಾಮ್ ಎಂದು ಹೇಳುತ್ತಾರೆ. ಆ ವಿದ್ಯಾರ್ಥಿ ಹೇಳಿದ: ನನಗೇನಾಯಿತೆಂದು ನಾನರಿಯೆ, ಆ ಸಮಯದಲ್ಲಿ ನನ್ನ ಬುದ್ಧಿ ಹಾಳಾಗಿತ್ತು!

ಮನುಷ್ಯನಿಗೆ ತನ್ನ ಆವಶ್ಯಕತೆ ಈಡೇರಿಸಲು ಅನ್ಯಮಾರ್ಗ ದೊರೆಯದಿರುವಾಗ ಅವನು ದೇವನ ಕಡೆಗೆ ಬಾಗುತ್ತಾನೆ. ಅವನು ಅಲ್ಲಾಹನನ್ನು ಬೇಡಿಕೊಳ್ಳುತ್ತಾನೆ. ಅವನನ್ನು ಸ್ತುತಿಸುತ್ತಾನೆ. ಅವನನ್ನು ಆರ್ದ್ರ ಹೃದಯದಿಂದ ಬೇಡಿಕೊಳ್ಳುತ್ತಾನೆ. ಇದೇ ರೀತಿಯ ಇನ್ನೊಂದು ಸಂಭವ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ:

ಪ್ರಥಮ ಜಾಗತಿಕ ಮಹಾಯುದ್ಧದ ಕಾಲದಲ್ಲಿ 1918ರಲ್ಲಿ ಜರ್ಮನಿ ದೇಶ ತನ್ನ ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸಿ ಮಿತ್ರಪಕ್ಷದ ಐಕ್ಯರಂಗ ಸೇನೆಯನ್ನು ಆಕ್ರಮಿಸಿತು.

ಆಗ ಇಂಗ್ಲಿಷ್ ಸೇನೆಯ ವಿರುದ್ಧ ಅಥವಾ ಐಕ್ಯರಂಗದ ಸೈನ್ಯದ ವಿರುದ್ಧ ಜರ್ಮನ್ ಸೈನ್ಯ ಹೋರಾಡುವಾಗ ಎಂತಹ ಪರಿಸ್ಥಿತಿ ಉಂಟಾಯಿತೆಂದರೆ ಐಕ್ಯರಂಗದ ಸೇನೆಗೆ ತಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತೋರಿತು. ಏಳು ಮೈಲು ಉದ್ದವಾಗಿದ್ದ ಪ್ರತಿರೋಧಕ ಸೈನ್ಯದಳ ವಿಭಜಿಸಲ್ಪಟ್ಟಿತು. ಅದರ ಒಂದು ಭಾಗ ಒಂದು ಕಡೆ ಇನ್ನೊಂದು ಭಾಗ ಇನ್ನೊಂದು ಕಡೆ ಜಮಾಯಿಸಿತು. ಇವೆರಡರ ಮಧ್ಯೆ ಇದ್ದ ಖಾಲಿ ಪ್ರದೇಶದಲ್ಲಿ ಜರ್ಮನ್ ಸೈನ್ಯ ಸುಲಭವಾಗಿ ನುಗ್ಗಿ ಹಿಂಬಾಗದಿಂದ ಆಕ್ರಮಿಸಿ ಇಂಗ್ಲಿಷ್ ಸೈನ್ಯವನ್ನು ನಾಶಮಾಡಬಹುದಾಗಿತ್ತು. ಆ ಸಮಯದಲ್ಲಿ ಅಲ್ಲಿದ್ದ ಜರ್ನಲ್ ತನ್ನ ಕಮಾಂಡರ್ ಇನ್ ಚೀಫ್‌ಗೆ ತಿಳಿಸಿದನು– ಇಂತಹ ಪರಿಸ್ಥಿತಿ ಉಂಟಾಗಿದೆ. ನಮ್ಮ ಬಳಿ ಸಾಕಷ್ಟು ಸೈನಿಕರು ಇಲ್ಲ. ಈ ವಿಭಜಿಸಲ್ಪಟ್ಟ ಸೇನಾದಳಗಳನ್ನು ಒಗ್ಗೂಡಿಸಲು ನನಗೆ ಸಾಧ್ಯವಾಗುವುದಿಲ್ಲ ಎಂದು.

ಅದು ಎಂತಹ ಪರಿಸ್ಥಿತಿಯಾಗಿತ್ತೆಂದರೆ ಅವರು ಭಾವಿಸುತ್ತಿದ್ದರು ನಮ್ಮ ಸೈನ್ಯ ನಾಶವಾಗುವುದು ಹಾಗೂ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಾಮಾವಶೇಷವಾಗುವುದು ಎಂದು. ಸೈನಿಕ ಜನರಲ್‌ನ ತಂತಿ ಸಂದೇಶ ತಲಪಿದಾಗ ಪ್ರಧಾನಮಂತ್ರಿ ಸಚಿವ ಸಂಪುಟದ ಸಭೆ ನಡೆಸುತ್ತಿದ್ದರು. ಈ ಸಮಾಚಾರ ದೊರಕಿದಾಗ ಪ್ರಧಾನಮಂತ್ರಿಗೆ ಏನೂ ಮಾಡಲು ಸಾಧ್ಯವಿರಲಿಲ್ಲ. ಹೆಚ್ಚುವರಿ ಸೈನ್ಯ ಇರಲಿಲ್ಲ. ಅಂತಹ ಸೈನ್ಯ ಇದ್ದರೂ ಕೂಡ ತಕ್ಷಣ ರಣರಂಗಕ್ಕೆ ತಲಪಿಸಲು ಸಾಧ್ಯವಿರಲಿಲ್ಲ. ಆ ಸಂದರ್ಭದಲ್ಲಿ ಪ್ರಧಾನಮಂತ್ರಿಗೆ ತೋಚಿತು. ಈಗ ಯಾವುದೇ ಬಾಹ್ಯ ಸಹಾಯ ತಲಪಿಸಲು ಸಾಧ್ಯವಿಲ್ಲ. ಅವರು ಹೇಳಿದರು: ನಾವು ಮೊಣಕಾಲೂರಿ ದೇವನೊಂದಿಗೆ ಪ್ರಾರ್ಥಿಸೋಣ ಅವನು ನಮ್ಮನ್ನು ರಕ್ಷಿಸಲಿ.

ಹೀಗೆ ಹೇಳಿ ಅವರೆಲ್ಲರೂ ಪ್ರಾರ್ಥಿಸಲು ತೊಡಗಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಏನು ಆಶ್ಚರ್ಯ! ಈ ಪ್ರಾರ್ಥನೆಯ ಫಲವಾಗಿಯೇ ಅವರು ಆ ಮಹಾ ವಿಪತ್ತಿನಿಂದ ರಕ್ಷಿಸಲ್ಪಟ್ಟಿರಬಹುದು!

ನಾನು ತಿಲಾವತ್ ಮಾಡಿದ ವಚನದಲ್ಲಿ ಅಲ್ಲಾಹನು ಹೇಳುವುದೇನೆಂದರೆ, ಕಷ್ಟಕಾಲದಲ್ಲಿ ಅಲ್ಲಾಹನ ಹೊರತು ಬೇರೆ ಯಾರೂ ಸಹಾಯ ನೀಡುವುದಿಲ್ಲ. ಅಲ್ಲಾಹನೇ ನಿಮ್ಮ ಜೊತೆಗಿದ್ದು ನಿಮಗೆ ಪ್ರಯೋಜನ ನೀಡುತ್ತಾನೆ. ಅಲ್ಲಾಹನು ಹೇಳುತ್ತಾನೆ: ಆರ್ದ್ರ ಹೃದಯದಿಂದ ಮಾಡಿದ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ನಾಸ್ತಿಕನು ಅಂತಹ ಸಂದರ್ಭದಲ್ಲಿ ಪ್ರಾರ್ಥಿಸಿದರೆ ಅವನ ಪ್ರಾರ್ಥನೆ ಸಹ ಅಂಗೀಕರಿಸಲ್ಪಡುತ್ತದೆ. ಅಲ್ಲಾಹನು ತನ್ನ ಅಸ್ತಿತ್ವದ ಸಾಕ್ಷ್ಯಗಳನ್ನು ಪ್ರಕಟಪಡಿಸಲು ನಾಸ್ತಿಕರಿಗೆ ಸಹ ಕೆಲವು ದೃಷ್ಟಾಂತಗಳನ್ನು ತೋರಿಸುತ್ತಾನೆ. ನಾಸ್ತಿಕನು ಭಾಗ್ಯವಂತನಾದರೆ ಈ ದೃಷ್ಟಾಂತಗಳು ಅವನ ಅಂತಿಮ ಗತಿಯನ್ನು ಸರಿಪಡಿಸಲು ಸಹಾಯಕವಾಗುತ್ತವೆ.

ಒಟ್ಟಿನಲ್ಲಿ ನಾನು ಮೇಲೆ ವಿವರಿಸಿದುದರ ಉದ್ದೇಶವೇನೆಂದರೆ ಲೌಕಿಕ ಜನರು ಸಹ ಯಾವುದೇ ಬೆಂಬಲ ದೊರೆಯದೆ ಇರುವಾಗ ಅಲ್ಲಾಹನ ಆಶ್ರಯವನ್ನು ಬೇಡಿಕೊಳ್ಳುತ್ತಾರೆ. ಈ ಜನರು ಸ್ವಂತ ಪ್ರಯತ್ನ ಮಾಡುತ್ತಾರೆ. ಹಾಗಿದ್ದರೂ ಅವರು ಕಷ್ಟದಲ್ಲಿದ್ದಾಗ ದೇವನ ಸಹಾಯ ಬೇಡುತ್ತಾರೆ. ಹಾಗಿರುವಾಗ, ನಮ್ಮ ಸರ್ವಸ್ವವೂ ಅಲ್ಲಾಹನ ಕಡೆಗೆ ದೃಷ್ಟಿ ಇರಿಸುವುದಾಗಿದೆ ಎಂದು ವಾದಿಸುವ ನಾವು ಈ ವಿಷಯದ ಕಡೆಗೆ ಎಷ್ಟು ಲಕ್ಷ್ಯ ನೀಡುವ ಆವಶ್ಯಕತೆ ಇದೆ. ನಮ್ಮ ದೃಷ್ಟಿ ಪ್ರತಿಯೊಂದು ಕ್ಷಣದಲ್ಲೂ ಅಲ್ಲಾಹನ ಕಡೆಗಿರಬೇಕು. ಅಲ್ಲಾಹನು ನಮಗೆ إِيَّاكَ نَعْبُدُ وَإِيَّاكَ نَسْتَعِينُ **"ಇಯ್ಯಾಕನಅ್‌ಬುದು ವ ಇಯ್ಯಾಕನಸ್ತಈನ್"** ಎಂಬ ಪ್ರಾರ್ಥನೆ ಇದಕ್ಕೋಸ್ಕರವೇ ಕಲಿಸಿರುವನು. ಪ್ರತಿಯೊಂದು ನಮಾಝ್‌ನಲ್ಲಿ, ಪ್ರತಿಯೊಂದು ರಕ್‌ಅತ್‌ನಲ್ಲಿ ಓದಬೇಕೆಂದು ಆಜ್ಞಾಪಿಸಿರುವನು. ನಮ್ಮ ದೃಷ್ಟಿ ಅಲ್ಲಾಹನಿಂದ ಎಷ್ಟು ಮಾತ್ರಕ್ಕೂ ದೂರ ಸರಿಯದಿರಲಿಕ್ಕಾಗಿ ಲೌಕಿಕ ಸಹಾಯಗಳ ಕಡೆಗೆ ದೃಷ್ಟಿ ಬೀರದಿರಲಿಕ್ಕಾಗಿ ಹೀಗೆ ಮಾಡಲಾಗಿದೆ. ನಮ್ಮ ಆವಶ್ಯಕತೆಗಳನ್ನು ಈಡೇರಿಸಲು ನಾವು ಲೌಕಿಕ ಮಾರ್ಗಗಳನ್ನು ಮೊದಲು ಅವಲಂಬಿಸಬೇಕು. ಅನಂತರ ದೇವನ ಕಡೆಗೆ ತಿರುಗಬೇಕು ಎಂದು ನಾವು ಎಂದಿಗೂ ಯೋಚಿಸಬಾರದು. ಬಾಹ್ಯ ಪ್ರಯತ್ನಗಳನ್ನು ನಿಸ್ಸಂಶಯವಾಗಿ ಮಾಡಬಹುದು. ಹೀಗೆ ಮಾಡಬೇಕೆಂದು ಅಲ್ಲಾಹನು ಸಹ ಹೇಳಿದ್ದಾನೆ. ಆದರೆ ಭರವಸೆ ಇಡಬೇಕಾದುದು ಅಲ್ಲಾಹನಲ್ಲಿ ಮಾತ್ರವಾಗಿರಬೇಕು. ಪ್ರತಿಯೊಂದು ನಮಾಝ್, ಪ್ರತಿಯೊಂದು ರಕ್‌ಅತ್‌ನಲ್ಲಿ ಈ ಪ್ರಾರ್ಥನೆ ಮಾಡಬೇಕೆಂದು ಕಲಿಸಿ ಅಲ್ಲಾಹನು ಹೀಗೆ ಸೂಚಿಸುತ್ತಾನೆ: ನೀವು ನನ್ನ ಕಡೆಗೆ ಮಾತ್ರ ದೃಷ್ಟಿ ಇರಿಸುವವರಾಗಬೇಕು.

إِيَّاكَ نَعْبُدُ وَإِيَّاكَ نَسْتَعِينُ **ಇಯ್ಯಾಕನಅ್‌ಬುದು ವ ಇಯ್ಯಾಕನಸ್ತಈನ್** ಎಂಬ ಪ್ರಾರ್ಥನೆ ಬಗ್ಗೆ ಒಂದು ಹದೀಸ್ ಹೀಗಿದೆ: ಈ ಪ್ರಾರ್ಥನೆ ಮಾಡುವಾಗ ಅಲ್ಲಾಹನು ಹೇಳುವನು. ಈ ಪ್ರಾರ್ಥನೆಯಲ್ಲಿ ನಾನು ಮತ್ತು ನನ್ನ ದಾಸರ ಮಧ್ಯೆ ಸಹಭಾಗಿತ್ವವಿದೆ. ನನ್ನ ದಾಸ ಏನನ್ನು ಬೇಡುತ್ತಾನೋ ಅದನ್ನು ನಾನು ಅವನಿಗೆ ಕೊಡುವೆನು. ಅಲ್ಲಾಹನು ಪ್ರಾರ್ಥನೆಗಳನ್ನು ಅಂಗೀಕರಿಸುವುದಾಗಿ ಖಾತರಿ ನೀಡಿರುವುದು ಮುಸ್ಲಿಮರಿಗೆ ದೊರೆತ ಭಾಗ್ಯವಲ್ಲವೇ? ಆದರೆ ಈ ಖಾತರಿ ದೊರೆಯುವುದು ಸ್ಥಿರವಾಗಿ ಆರಾಧನೆ ಬಗ್ಗೆ ಲಕ್ಷ್ಯವಿಟ್ಟು ಆರಾಧಿಸುವಾಗ ಮಾತ್ರವಾಗಿದೆ. ನಾನು ವಿವರಿಸಿದ ಹಾಗೆ ಕೇವಲ ಕಷ್ಟಕಾಲದಲ್ಲಿ ಮಾತ್ರ ಪ್ರಾರ್ಥಿಸುವವರಾಗಬಾರದು. ಅಂತಹ ಪ್ರಾರ್ಥನೆ ನಾಸ್ತಿಕರು ಸಹ ಮಾಡುತ್ತಾರೆ. ನಮ್ಮ ಪ್ರಾರ್ಥನೆ ಆ ರೀತಿ ಆಗಬಾರದು. ನಾವು ನೆನಪಿಡಬೇಕಾದುದೇನೆಂದರೆ ನಾವು ಅಹ್ಮದಿಯರಾಗಿದ್ದೇವೆ. ಈ ಕಾಲಘಟ್ಟದ ಇಮಾಮರ ಜೊತೆ ಬೈಅತ್ ಪ್ರತಿಜ್ಞೆ ಮಾಡಿದ್ದೇವೆ. ನಮ್ಮ ನಡೆನುಡಿಗಳನ್ನು ಅಲ್ಲಾಹನ ಪ್ರೀತಿಗಳಿಸುವ ರೀತಿಯಲ್ಲಿ ಪರಿವರ್ತಿಸುವ ಪ್ರತಿಜ್ಞೆ ನಾವು ಮಾಡಿದ್ದೇವೆ. ನಾವು ಕಷ್ಟಕಾಲದಲ್ಲೂ ಸಂತೋಷದ ಕಾಲದಲ್ಲೂ ಅಲ್ಲಾಹನಿಂದಲೇ ಸಹಾಯ ಬೇಡಿಕೊಳ್ಳುವ ಮತ್ತು ಅನ್ಯರ ಬಗ್ಗೆ ನಿರಾಸಕ್ತಿ ಹೊಂದುವ ಪ್ರತಿಜ್ಞೆ ಮಾಡಿದ್ದೇವೆ. ನಾವು ನಮ್ಮ ಪ್ರತಿಜ್ಞೆಯನ್ನು ಮನವರಿಕೆ ಮಾಡಲು ಈ ದುಆವನ್ನು ಚೆನ್ನಾಗಿ ಅರ್ಥ

ಮಾಡಿಕೊಳ್ಳುವುದರ ಆವಶ್ಯಕತೆ ಇದೆ. ನೀರಿನಲ್ಲಿ ಮುಳುಗಿ ಹೋಗುತ್ತಿರುವ ನಾಸ್ತಿಕನ ಹಾಗೆ ನಾವು ಅಲ್ಲಾಹನನ್ನು ಸಹಾಯಕ್ಕಾಗಿ ಕರೆಯುವವರಾಗಬಾರದು. ಉನ್ನತ ಆಧ್ಯಾತ್ಮಿಕ ಸ್ಥಾನ ಪಡೆಯುವ ಸತ್ಯವಿಶ್ವಾಸಿಗಳ ಹಾಗೆ ನಾವು ಅಲ್ಲಾಹನ ಆರಾಧನೆ ಮತ್ತು ಸಹಾಯದ ಬೇಡಿಕೊಳ್ಳುವಿಕೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರ ಪ್ರಕಾರ ವರ್ತಿಸುವವರಾಗಬೇಕು. ನಮ್ಮ ಎಲ್ಲಾ ಶಕ್ತಿ, ನಮ್ಮ ಎಲ್ಲಾ ಸಾಮರ್ಥ್ಯ, ನಮ್ಮ ಪರಿಪೂರ್ಣ ಆಶ್ರಯ ಅಲ್ಲಾಹನ ಮುಂದೆ ಬಾಗುವುದರಲ್ಲಿ ಅಡಕವಾಗಿದೆ ಎಂಬುದು ನಮ್ಮ ವಾದವಾಗಿದೆ.

ನಾವು ಈ ಆಜ್ಞೆಗಳನ್ನು ಪಾಲಿಸಲು ಏನು ಮಾಡಬೇಕೆಂಬುದಾಗಿ ಸ್ವಯಂ ಪರಿಶೀಲಿಸಬೇಕಾಗಿದೆ. ನಾವು ಏನು ಮಾಡುತ್ತಿದ್ದೇವೆ, ನಮ್ಮ ಆರಾಧನೆಗಳು ಮತ್ತು ನಾವು ಸಹಾಯಕ್ಕೋಸ್ಕರ ಬೇಡಿಕೊಳ್ಳುವುದು ಅಲ್ಲಾಹನು ಹೇಳಿದ ಮಟ್ಟಕ್ಕೆ ಅನುಸಾರವಾಗಿದೆಯೋ? ಅಥವಾ ನಾವು ಫರ್ಝ್ ನಮಾಝ್‌ಗಳಲ್ಲಿ ಮಾತ್ರ ಪ್ರತಿದಿನ ಮೂವತ್ತೆರಡು ಸಾರಿ ಗಿಳಿಯಂತೆ إِيَّاكَ نَعْبُدُ وَإِيَّاكَ نَسْتَعِينُ **ಇಯ್ಯಾಕನಅ್‌ಬುದು ವ ಇಯ್ಯಾಕನಸ್ತಈನ್** ಎಂದು ಪಠಿಸಿ ಸುಮ್ಮನಿರುತ್ತೇವೆಯೋ? ಎಂದು ಸಹ ನಾವು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ನಾವು ನೆನಪಿಡಬೇಕಾದುದೇನೆಂದರೆ ನಾವು ಬಲಹೀನರಾಗಿದ್ದೇವೆ. ನಮ್ಮ ಶತ್ರು ಬಹಳ ಶಕ್ತಿಶಾಲಿ ಆಗಿದ್ದಾನೆ. ಶತ್ರುವನ್ನು ಎದುರಿಸಲು ನಮ್ಮ ಬಳಿ ಲೌಕಿಕ ಶಕ್ತಿಯಾಗಲಿ ಸಾಮಾಗ್ರಿಗಳಾಗಲಿ ಇಲ್ಲ. ಬೇರೆ ಯಾವುದಾದರೂ ರೀತಿಯ ಮಾರ್ಗವೂ ನಮಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನ ಮುಂದೆ ಬಾಗಿ ಬೇಡಿಕೊಳ್ಳುವುದರ ಹೊರತು ಬೇರೆ ಏನೂ ಸಾಧ್ಯವಿಲ್ಲ. إِيَّاكَ نَعْبُدُ وَإِيَّاكَ نَسْتَعِينُ **ಇಯ್ಯಾಕನಅ್‌ಬುದು ವ ಇಯ್ಯಾಕನಸ್ತಈನ್** ಎಂಬ ಪ್ರಾರ್ಥನೆಯನ್ನು ಮನವರಿಕೆ ಮಾಡಿಕೊಂಡು ಅಲ್ಲಾಹನ ಬಾಗಿಲಲ್ಲಿರುವವರಾಗಿರಿ.

ಈಗ ಲೋಕದಲ್ಲಿ ಶೈತಾನೀ ಆಕ್ರಮಣಗಳು ಬಹಳ ಉನ್ನತಿಯನ್ನು ಪಡೆದ ಸ್ಥಿತಿಯಲ್ಲಿವೆ. ಪ್ರತಿಯೊಂದು ಸ್ಥಳದಲ್ಲಿ ನಮ್ಮ ಮಾರ್ಗದಲ್ಲಿ ಕಷ್ಟಗಳನ್ನು ನೀಡಲಾಗುತ್ತಿದೆ. ನಾವು ಈ ಕಾಲಘಟ್ಟದ ಇಮಾಮರನ್ನು ನಂಬಿರುವ ಕಾರಣದಿಂದ ಮುಸ್ಲಿಮರೆಂದು ಹೇಳಿಕೊಳ್ಳುವವರು ನಮ್ಮೊಡನೆ ಶತ್ರುತ್ವದಲ್ಲಿ ಮುಂದೆ ಮುಂದೆ ಸಾಗುತ್ತಿದ್ದಾರೆ. ನಮ್ಮ ಜಮಾಅತ್ ಲೋಕದ ಶ್ರದ್ಧೆಯನ್ನು ತನ್ನ ಕಡೆಗೆ ಆಕರ್ಷಿಸುತ್ತದೆ ಎಂದು ಅನ್ಯರು ಸಹ ನಮ್ಮೊಡನೆ ಅಸೂಯೆ ಹೊಂದಿದ್ದಾರೆ.

ನೀವು ಯಾವಾಗಲೂ ನೆನಪಿಟ್ಟುಕೊಳ್ಳಿರಿ. ಅಲ್ಲಾಹನು ಯಾರಿಗಾದರೂ ಸಹಾಯ ನೀಡಲು ನಿರ್ಧರಿಸಿದರೆ ಅವನು ಜಯಶಾಲಿಯಾಗುತ್ತಾನೆ. ಯಾವುದೇ ಲೌಕಿಕ ಶಕ್ತಿ ಅವನ ಜಯವನ್ನು ತಡೆಗಟ್ಟಲು ಸಮರ್ಥವಾಗಲಾರದು. ಏಕೆಂದರೆ ಅಲ್ಲಾಹನ ಸಹಾಯ ಬಹಳ ವಿಶಾಲವಾಗಿದೆ. ಅವನ ಶಕ್ತಿಗಳು ಎಂದೂ ಕೊನೆಗೊಳ್ಳದವುಗಳಾಗಿವೆ. ಅಲ್ಲಾಹನ ಅಸ್ತಿತ್ವ ಸೀಮಾತೀತವಾಗಿದೆ. ಅವನ ಗುಣ ವಿಶೇಷಗಳೂ ಸೀಮಿತವಾಗಿಲ್ಲ. ಆದುದರಿಂದ ಅಲ್ಲಾಹನ ಮುಂದೆ ಬಾಗುವುದು ಪ್ರತಿಯೊಬ್ಬ ಅಹ್ಮದಿಯ ಕೆಲಸವಾಗಿದೆ. ಅವನಿಂದ ಸಹಾಯ ಬೇಡಿಕೊಳ್ಳುವುದು ಪ್ರತಿಯೊಬ್ಬ ಅಹ್ಮದಿಯ ಕೆಲಸವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: “ನೀವು ನೆನಪಿಟ್ಟುಕೊಳ್ಳಿರಿ ಅಲ್ಲಾಹನಿಗೆ ಯಾರ ಆಶ್ರಯದ ಆವಶ್ಯಕತೆಯೂ ಇಲ್ಲ. ಅವನೊಂದಿಗೆ ಪದೇ ಪದೇ ಪ್ರಾರ್ಥಿಸದೆ ಇದ್ದರೆ ಅವನು ಲಕ್ಷಿಸಲಾರನು.”

ಆದುದರಿಂದ, ಅತ್ಯಂತ ಹೆಚ್ಚು ಸಾರಿ ಮತ್ತು ಪದೇ ಪದೇ ಮಾಡುವ ಪ್ರಾರ್ಥನೆಗಳೇ ನಮ್ಮ ಜಯಗಳ ರಹಸ್ಯವಾಗಿದೆ. ಇದರ ಕಡೆಗೆ ನಾವು ಬಹಳ ಲಕ್ಷ್ಯ ನೀಡಬೇಕು.

ನಾವು ಪ್ರಾರ್ಥಿಸಬೇಕು ನಮಗೆದುರಾದ ಕಷ್ಟಗಳಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ. ಯಾವುದಾದರೂ ವಿರೋಧಿ ಗುಂಪು ಅಥವಾ ಸರಕಾರಗಳು ಇಂತಹ ಕಷ್ಟ ಉಂಟುಮಾಡುತ್ತವೆ. ಅಸೂಯೆಗಾರರು ಸಮಾಜದಲ್ಲಿ ಗೊಂದಲ ಉಂಟುಮಾಡಲು ಇಂತಹ ಕಷ್ಟ ಉಂಟುಮಾಡುತ್ತಾರೆ. ಅವರು ಸಂಪರ್ಕ ಮಾಧ್ಯಮಗಳನ್ನಾಗಲಿ ಬೇರೆ ವಿಧಾನಗಳನ್ನು ಅನುಸರಿಸಿಯಾಗಲಿ ಹೀಗೆ ಮಾಡುತ್ತಾರೆ. ಜಮಾಅತಿನ ಗೌರವಕ್ಕೆ ಹಾನಿ ಉಂಟುಮಾಡಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇವರೆಲ್ಲರ ವಿರುದ್ಧ ಅಲ್ಲಾಹನು ನಮಗೆ ಸಹಾಯ ನೀಡಲಿ. ಅಲ್ಲಾಹನ ಹೊರತು ಬೇರೆ ಯಾರದಾದರೂ ಸಹಾಯದ ಪ್ರತೀಕ್ಷೆ ನಮಗಿಲ್ಲ. ಅಂತಹ ಪ್ರತೀಕ್ಷೆ ನಾವು ಹೊಂದಿಯೂ ಇಲ್ಲ. ನಾವೆಲ್ಲರೂ ಹೀಗೆ ಪ್ರಾರ್ಥಿಸಬೇಕು: ಓ ಅಲ್ಲಾಹ್ ನಮ್ಮ ತಪ್ಪುಗಳ ಕಾರಣ ನೀನು ವಾಗ್ದಾನ ಮಾಡಿದ ಸಹಾಯ ಮುಂದೂಡಲಾಗಿದ್ದರೆ, ನಮ್ಮ ಮೇಲೆ ದಯೆದೋರುತ್ತಾ ನಮ್ಮನ್ನು ಕ್ಷಮಿಸು. ನಿನ್ನ ಕೋಪದ ಸ್ಥಿತಿಯಿಂದ ನಮ್ಮನ್ನು ಹೊರಗೆ ತಂದು ನಿನ್ನ ಅನುಗ್ರಹಗಳ ಮತ್ತು ಬಹುಮಾನಗಳ ಮಳೆ ಯಾರ ಮೇಲೆ ಯಾವಾಗಲೂ ಸುರಿಸಲ್ಪಡುತ್ತಿದೆಯೋ ಮತ್ತು ಯಾರು إِيَّاكَ نَعْبُدُ **ಇಯ್ಯಾಕನಅ್‌ಬುದು** ಮತ್ತು إِيَّاكَ نَسْتَعِينُ **ಇಯ್ಯಾಕನಸ್ತಈನ್** ಪ್ರಾರ್ಥನೆಯ ವಾಸ್ತವಿಕ ಅರ್ಥ ಮನವರಿಕೆ ಮಾಡಿಕೊಂಡಿರುವರೋ ಅಂತಹ ಜನರೊಂದಿಗೆ ನಮ್ಮನ್ನು ಸೇರಿಸು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: “ನೀವು ನೋಡಿರಿ ಅಲ್ಲಾಹನು إِيَّاكَ نَعْبُدُ **ಇಯ್ಯಾಕನಅ್‌ಬುದು**(ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ) ಎಂದು ಪ್ರಾರ್ಥಿಸಲು ಆಜ್ಞಾಪಿಸಿದ್ದಾನೆ. ಆಗ ಮನುಷ್ಯನು ತನ್ನ ಶಕ್ತಿ ಸಾಮರ್ಥ್ಯಗಳ ಮೇಲೆ ಭರವಸೆ ಹೊಂದಿ ಅಲ್ಲಾಹನಿಂದ ದೂರ ಸರಿದು ಹೋಗಲು ಸಾಧ್ಯವಿತ್ತು. ಆದುದರಿಂದ ಅಲ್ಲಾಹನು ಅದರೊಂದಿಗೆಯೇ إِيَّاكَ نَسْتَعِينُ **ಇಯ್ಯಾಕನಸ್ತಈನ್**(ನಿನ್ನೊಡನೆ ಮಾತ್ರ ನಾವು ಸಹಾಯ ಯಾಚಿಸುತ್ತೇವೆ) ಎಂದು ಪ್ರಾರ್ಥಿಸಲು ಹೇಳಿದ್ದಾನೆ. ಮನುಷ್ಯನು ಮಾಡುವ ಪ್ರಾರ್ಥನೆ ಅವನ ಸ್ವಂತ ಶಕ್ತಿಯ ಮೂಲಕವೆಂದು ಅವನು ಭಾವಿಸಬಾರದು. ಅಲ್ಲಾಹನ

ಸಹಾಯ ದೊರಕದೆ ಇದ್ದರೆ ಮತ್ತು ಪರಿಶುದ್ಧನಾದ ಆತನು ನಮಗೆ ಭಾಗ್ಯ ಮತ್ತು ಶಕ್ತಿ ನೀಡದೆ ಇದ್ದರೆ ನಮಗೆ ಏನನ್ನೂ ಮಾಡಲು ಸಾಧ್ಯವಿಲ್ಲ.”

ನಾವೆಲ್ಲರೂ ಈ ಮುಖ್ಯ ವಾಸ್ತವಿಕತೆಯನ್ನು ಯಾವಾಗಲೂ ಗಮನದಲ್ಲಿರಿಸಬೇಕು. ಈ ಮುಖ್ಯ ವಿಷಯವನ್ನು ಯಾವಾಗಲೂ ನಮ್ಮ ಗಮನದಲ್ಲಿರಿಸಲು ಅದನ್ನು ಮನವರಿಕೆ ಮಾಡಲು ಮತ್ತು ಅದರ ಪ್ರಕಾರ ಕಾರ್ಯನಿರತರಾಗಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ.

ಪ್ರಾರ್ಥನೆ ಮಾಡುವ ಬಗ್ಗೆ ನಾನು ಪುನಃ ನಿಮಗೆ ನೆನಪಿಸಿಕೊಡಲು ಇಚ್ಛಿಸುತ್ತೇನೆ. ಲೋಕದ ಪರಿಸ್ಥಿತಿ ಬಹಳ ವೇಗವಾಗಿ ಬದಲಾವಣೆ ಹೊಂದುತ್ತಿದೆ. ಅಲ್ಲಾಹನು ಅದನ್ನು ಜಮಾಅತಿನ ಅಭಿವೃದ್ಧಿಗೆ ಪೂರಕವನ್ನಾಗಿ ಮಾಡಲಿ. ಅದು ಜಮಾಅತಿನ ಅಭಿವೃದ್ಧಿಗೆ ತಡೆಯನ್ನುಂಟು ಮಾಡದಿರಲಿ. ನಮ್ಮನ್ನು ನಿಜವಾದ ರೀತಿಯಲ್ಲಿ ಅಲ್ಲಾಹನನ್ನು ಆರಾಧಿಸುವವರನ್ನಾಗಿಯೂ ಅವನ ಸಹಾಯ ಗಳಿಸುವವರನ್ನಾಗಿಯೂ ಮಾಡಲಿ– ಆಮೀನ್.

––––––––––––––––*****––––––––––––––

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 28-11-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email**: khutuba.kannada@gmail.com*